**ಕುವೈತ್‌ನಲ್ಲಿ ಕಾರ್ಮಿಕ ಕ್ಯಾಂಪ್‌ಗೆ ಪ್ರಧಾನ ಮಂತ್ರಿ ಭೇಟಿ**

ಡಿಸೆಂಬರ್ 21, 2024

ತಮ್ಮ ಕುವೈತ್ ಭೇಟಿಯ ಮೊದಲ ಕಾರ್ಯಕ್ರಮವಾಗಿ, ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಸುಮಾರು 1500 ಭಾರತೀಯ ಪ್ರಜೆಗಳನ್ನು ಹೊಂದಿರುವ ಕುವೈತ್‌ನ ಮಿನಾ ಅಬ್ದುಲ್ಲಾ ಪ್ರದೇಶದಲ್ಲಿ ಕಾರ್ಮಿಕ ಶಿಬಿರಕ್ಕೆ ಭೇಟಿ ನೀಡಿದರು. ಪ್ರಧಾನಮಂತ್ರಿಯವರು ಭಾರತದ ವಿವಿಧ ರಾಜ್ಯಗಳ ಭಾರತೀಯ ಕಾರ್ಮಿಕರ ವಿಭಿನ್ನ ವರ್ಗಗಳೊಂದಿಗೆ ಸಂವಾದ ನಡೆಸಿದರು ಮತ್ತು ಅವರ ಯೋಗಕ್ಷೇಮವನ್ನು ವಿಚಾರಿಸಿದರು.

2. ಕಾರ್ಮಿಕ ಶಿಬಿರದ ಭೇಟಿಯು ವಿದೇಶದಲ್ಲಿರುವ ಭಾರತೀಯ ಕಾರ್ಮಿಕರ ಕಲ್ಯಾಣಕ್ಕೆ ಪ್ರಧಾನ ಮಂತ್ರಿ ನೀಡಿದ ಪ್ರಾಮುಖ್ಯತೆಯ ಸಂಕೇತವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ, ಸರ್ಕಾರವು ಇ-ಮೈಗ್ರೇಟ್ ಪೋರ್ಟಲ್, ಮದದ್ ಪೋರ್ಟಲ್‌ನಂತಹ ಹಲವಾರು ತಂತ್ರಜ್ಞಾನ-ಆಧಾರಿತ ತೊಡಗುವಿಕೆಗಳನ್ನು ಕೈಗೊಂಡಿದೆ ಮತ್ತು ವಿದೇಶದಲ್ಲಿ ಭಾರತೀಯ ಕೆಲಸಗಾರರ ಕಲ್ಯಾಣಕ್ಕಾಗಿ ಪ್ರವಾಸಿ ಭಾರತೀಯ ಬಿಮಾ ಯೋಜನೆಯನ್ನು ಅಪ್ಗ್ರೇಡ್ ಮಾಡಿದೆ.

ಕುವೈತ್ ಸಿಟಿ

ಡಿಸೆಂಬರ್ 21, 2024